# ಸ್ಫೂರ್ತಿಧಾಮ

ಅಂಜನಾನಗರ, ಮಾಗಡಿ ಮುಖ್ಯರಸ್ತೆ, ಬೆಂಗಳೂರು – 560091

All life is one



# ಅಂಬೇಡ್ಕರ್ ಹಬ್ಬ 2025

## ವೈವಿಧ್ಯತೆಯ ಸಂಭ್ರಮಾಚರಣೆ

ದಿನಾಂಕ 14.04.2025, ಬೆಳಿಗ್ಗೆ 9.00 ಕ್ಕೆ
ಬುದ್ಧ ಮತ್ತು ಅಂಬೇಡ್ಕರ್ ಪ್ರತಿಮೆಗಳಿಗೆ ಮಾಲಾರ್ಪಣೆಯ ಮೂಲಕ
ಕಾರ್ಯಕ್ರಮಗಳ ಪ್ರಾರಂಭ

ತದನಂತರ, ದಿನಪೂರ್ತಿ ವಿವಿಧ ಸಾಂಸ್ಕೃತಿಕ ಚಟುವಟಿಕೆಗಳು, ಚರ್ಚೆಗಳು
ಭೋಜನ ಮತ್ತು ಟೀ, ಕಾಫಿ ಇರುತ್ತದೆ.

**ಬೋಧಿವೃಕ್ಷ ಮತ್ತು ಬೋಧಿವರ್ಧನ ಪ್ರಶಸ್ತಿ ಪ್ರದಾನ ಸಮಾರಂಭ**
**ಮಧ್ಯಾಹ್ನ 3.00 ಗಂಟೆಯಿಂದ**

**ಎಲ್ಲರಿಗೂ ಆದರದ ಸ್ವಾಗತ**

ಸ್ಫೂರ್ತಿಧಾಮದ ಬಳಗ

## ಪ್ರಶಸ್ತಿಗಳನ್ನು ಕುರಿತು...

ಕಳೆದ ಹದಿನಾರು ವರ್ಷಗಳಿಂದ 'ಅಂಬೇಡ್ಕರ್ ಜಯಂತಿ'ಯನ್ನು 'ಅಂಬೇಡ್ಕರ್ ಹಬ್ಬ'ವಾಗಿ ಆಚರಿಸಿಕೊಂಡು ಬರುತ್ತಿರುವ 'ಸ್ಫೂರ್ತಿಧಾಮ', ತಳಸ್ತರದವರ ಅಭಿವೃದ್ಧಿ ಮತ್ತು ಏಳಿಗೆಗಾಗಿ ದುಡಿದವರನ್ನು ಗುರುತಿಸುವ, ಗೌರವಿಸುವ ಸಲುವಾಗಿ 'ಬೋಧಿವೃಕ್ಷ' ಮತ್ತು 'ಬೋಧಿವರ್ಧನ' ಹೆಸರಿನ ರಾಷ್ಟ್ರ ಪ್ರಶಸ್ತಿಗಳನ್ನು ನೀಡುತ್ತಿದೆ. 'ಬೋಧಿವೃಕ್ಷ' ಪ್ರಶಸ್ತಿಗೆ ಪ್ರಶಸ್ತಿ ಫಲಕ ಮತ್ತು ಒಂದು ಲಕ್ಷರೂಪಾಯಿ ನಗದು ಹಾಗೂ ಐದು 'ಬೋಧಿವರ್ಧನ' ಪ್ರಶಸ್ತಿಗೆ ಪ್ರಶಸ್ತಿ ಫಲಕ ಮತ್ತು ತಲಾ ಇಪ್ಪತ್ತೈದು ಸಾವಿರ ರೂಪಾಯಿ ನಗದು ನೀಡಲಾಗುತ್ತದೆ.

'A great man is different from an eminent one, in that he is ready to be a servant of the society' ಎಂದು ಅಂಬೇಡ್ಕರ್ ಹೇಳಿದ ಮಾತುಗಳು ತಳಸ್ತರದವರ ಚಲನೆಗೆ ತಳಪಾಯವಾಗಬೇಕಾದ ಸೇವೆಯ ಮೌಲ್ಯವನ್ನು ಎತ್ತಿ ಹಿಡಿಯುತ್ತದೆ. ತೀರಾ ನಿಕೃಷ್ಟರೆಂದು ಪರಿಗಣಿಸಲ್ಪಡುವ ತಳಸಮುದಾಯದವರ ಹಿತಕ್ಕೆ ತಮ್ಮನ್ನು ತೆತ್ತುಕೊಂಡು, ಅವರ ಬದುಕಿನಲ್ಲಿ ಗುಣಾತ್ಮಕವಾದ ಬದಲಾವಣೆಯನ್ನು ತಂದವರಿಗೆ ಈ ಪ್ರಶಸ್ತಿಗಳನ್ನು ನೀಡಲಾಗುತ್ತದೆ. ನಮ್ಮ ಕಾಲದ ರೋಗಗ್ರಸ್ಥ ಸ್ಥಿತಿಯನ್ನು, ತಾಯ್ತನದ ಇಂಥ ವಾತ್ಸಲ್ಯದ ಮೂಲಕ ಗುಣಪಡಿಸುವ 'ಮಹಾತ್ಮ'ರನ್ನು ಪುರಸ್ಕರಿಸುವ ಮೂಲಕ 'ಸ್ಫೂರ್ತಿಧಾಮ' ಅವರ ಜೊತೆಗೆ ಹೆಜ್ಜೆ ಹಾಕುತ್ತದೆ.

ಈ ಪ್ರಶಸ್ತಿಗಳು ಹಲವು ಕಾರಣಗಳಿಗಾಗಿ ವಿಭಿನ್ನವಾದವೂ ಹೌದು, ವಿಶಿಷ್ಟವಾದವೂ ಹೌದು. ನಮ್ಮಲ್ಲಿ ರಾಷ್ಟ್ರ, ಮತ್ತು ರಾಜ್ಯಮಟ್ಟದ ಸರ್ಕಾರಿ, ಅರೆಸರ್ಕಾರಿ, ಪ್ರತಿಷ್ಠಿತ ಅಕಾಡೆಮಿಗಳು, ಸಂಘ–ಸಂಸ್ಥೆಗಳು ಕೊಡುವ ಅನೇಕ ಪ್ರಶಸ್ತಿಗಳಿವೆ. ಆದರೆ, ಆರ್ಥಿಕ, ಸಾಮಾಜಿಕ, ರಾಜಕೀಯ ಅಥವ ಶೈಕ್ಷಣಿಕ ಬಂಡವಾಳವಿಲ್ಲದೆ ತಳಸ್ತರದವರ ಬದುಕನ್ನು ಅರ್ಥಪೂರ್ಣವಾಗಿ ವಿಸ್ತರಿಸುವ ಕಾರ್ಯದಲ್ಲಿ ತೊಡಗಿಕೊಂಡಿರುವವರನ್ನು ಗೌರವಿಸುವ ಪ್ರಶಸ್ತಿಗಳು ನಮ್ಮಲ್ಲಿಲ್ಲ. ಸಮಾಜದೊಂದಿಗೆ ಇಂಥ ಸಾವಯುವ ಸಂಬಂಧವನ್ನು ಸ್ಥಾಪಿಸಿಕೊಂಡವರನ್ನು ಸನ್ಮಾನಿಸುವ ಮೂಲಕ 'ಸ್ಫೂರ್ತಿಧಾಮ' ತನ್ನ ಘನತೆಯನ್ನು ಹೆಚ್ಚಿಸಿಕೊಳ್ಳಲು ಬಯಸುತ್ತದೆ.

## 'ಬೋಧಿವೃಕ್ಷ' ಪ್ರಶಸ್ತಿ

### ಪ್ರೊ. ವೆಲೆರಿಯನ್ ರಾಡ್ರಿಗ್ಯೂಸ್



ಪ್ರೊ. ವೆಲೆರಿಯನ್ ರಾಡ್ರಿಗ್ಯೂಸ್ ಅವರು ನಮ್ಮ ಕಾಲದ ಅದ್ವಿತೀಯ ವಿದ್ವಾಂಸರು ಮತ್ತು ರಾಜಕೀಯ ವಿಜ್ಞಾನಿಯಾಗಿದ್ದಾರೆ. ಡಾ. ಬಿ.ಆರ್. ಅಂಬೇಡ್ಕರ್ ಅವರ ಸಿದ್ಧಾಂತಗಳನ್ನು ಆಳವಾಗಿ ಅಧ್ಯಯನ ಮಾಡಿರುವ ಶ್ರೀಯುತರು, ಆ ಮೂಲಕ ಭಾರತದ ಸಂವಿಧಾನದ ಮೌಲ್ಯಗಳನ್ನು ಪುನರ್‌ಸ್ಥಾಪಿಸುವ ಮತ್ತು ಅದರ ಪರವಾಗಿ ಅಸ್ಖಲಿತವಾಗಿ ನಿಲ್ಲುವ ನಿಲುವುಗಳೇ ಅಂತಿಮವಾದವು ಎಂಬುದನ್ನು ಸ್ಪಷ್ಟಪಡಿಸುತ್ತಾರೆ. ಜರ್ಮನಿ ಮತ್ತು ಕೆನಡಾದ ಹಲವು ವಿಶ್ವವಿದ್ಯಾಲಯಗಳ ಸಂದರ್ಶಕ ಪ್ರಾಧ್ಯಾಪರಾಗಿದ್ದ ಸಂದರ್ಭದಲ್ಲಿ ಪ್ರೊ. ಅವರು ಅಂಬೇಡ್ಕರ್ ಚಿಂತನೆಗಳ ಅಂತಸ್ಸತ್ವ ಮತ್ತು ಮೌಲ್ಯಗಳನ್ನು ಪ್ರಸಾರ ಮಾಡುವುದರಲ್ಲಿ ಮುಖ್ಯವಾದ ಪಾತ್ರವನ್ನು ವಹಿಸಿದ್ದಾರೆ. ಅವರು, ಕರಾವಳಿ ಕರ್ನಾಟಕದ ಭೂರಹಿತ ತಳಸಮುದಾಯಗಳ ರೈತರಿಗೆ ಭೂಮಿಯನ್ನು ಕೊಡಿಸುವುದಕ್ಕಾಗಿ ಹೋರಾಟಗಳಲ್ಲೂ ತೊಡಗಿದ್ದವರು. ಅವರ ಕೃತಿಗಳು, ಮಾತುಗಳು, ಅಂಕಣಗಳು ಮತ್ತು ವಿದ್ಯಾರ್ಥಿಗಳು, ಭಾರತದಲ್ಲಿ ಸಮಾನತೆ, ನ್ಯಾಯ ಹಾಗು ಜಾತ್ಯಾತೀತ ಮೌಲ್ಯಗಳ ಹಿಲಾಲು ರೂಪಗಳಾಗಿವೆ.

# ‘ಬೋಧಿವರ್ಧನ’ ಪ್ರಶಸ್ತಿಗಳು

## ಶ್ರೀ ಬೆಟ್ಟಯ್ಯ ಕೋಟೆ



ಹೆಗ್ಗಡದೇವನಕೋಟೆಯ ತಂಬಡಯ್ಯ ಮತ್ತು ಲಕ್ಷ್ಮಮ್ಮ ದಂಪತಿಯ ಮಗನಾಗಿ ಜನಿಸಿದ ಬೆಟ್ಟಯ್ಯ ಕೋಟೆ ಅವರು ಬಿಎ ಪದವಿ ನಂತರ ಸಮಾಜ ಸೇವೆಯಲ್ಲಿ ತೊಡಗಿಸಿಕೊಂಡಿದ್ದಾರೆ. 1974ರಲ್ಲಿ ದಲಿತ ಸೇವಕ ಸಂಘ ಮತ್ತು 1981ರಲ್ಲಿ ದಲಿತ ಸಂಘರ್ಷ ಸಮಿತಿಗೆ ಸೇರಿ ಹೆಗ್ಗಡದೇವನಕೋಟೆ ತಾಲ್ಲೂಕು ಸಂಚಾಲಕರಾಗಿ ಆಯ್ಕೆಯಾದರು. ಅಲ್ಲಿಂದ ಅವರು ಅನೇಕ ದಲಿತರ ಪರ ಭೂಹೋರಾಟಗಳಲ್ಲಿ ತಮ್ಮನ್ನು ಸಂಪೂರ್ಣವಾಗಿ ತೊಡಗಿಸಿಕೊಂಡು ಹುಣಸೆಕುಪ್ಪೆ, ನಂಜಯ್ಯನ ಕಾಲೋನಿ, ಪಡುಕೋಟೆ, ದೇವಲಾಪುರ, ಹುಣಸೂರು ಬಿ.ಆರ್ ಕಾವಲ್, ಪಿರಿಯಾಪಟ್ಟಣ ಗುಡ್ಡೆನಹಳ್ಳಿ ಭೂ ಹೋರಾಟಗಳು, ಸುರಗುರು ಮತ್ತು ಬದನವಾಳು ದಲಿತರ ಹತ್ಯಾಕಾಂಡ, ಚಾಮಲಾಪುರ ಉಷ್ಣ ಸ್ಥಾವರ, ಮೈಸೂರು ತಾಲ್ಲೂಕು ಬೆಲವತ್ತ ನಿವೇಶನ, ಚಂದ್ರಗುತ್ತಿ ಬೆತ್ತಲೆ ಸೇವೆ, ಹುಣಸೆಕೋಟೆ ಕಂಬಾಲಪಲ್ಲಿ ನರಮೇಧ ಹೀಗೆ ಹತ್ತು ಹಲವು ಹೋರಾಟಗಳಲ್ಲಿ ಭಾಗಿಯಾಗಿರುತ್ತಾರೆ. ಆಂಧ್ರದ ಚಂದೂರು ಹತ್ಯಾಕಾಂಡದ ವಿರುದ್ಧ ಜನಕಲಾ ಮೇಳ ಸಹ ಇವರು ಸಂಘಟಿಸಿರುತ್ತಾರೆ. ಹೀಗೆ ಹತ್ತು ಹಲವು ಹೋರಾಟಗಳಲ್ಲಿ ಭಾಗವಹಿಸಿರುವ ಇವರ ಜನ ಸೇವೆ ಅಗಾಧವಾದುದು.

## ಶ್ರೀಮತಿ ನಫೀಸಾ ಪೆರುವಾಯಿ



ಶ್ರೀಮತಿ ನಫೀಸಾ ಪೆರುವಾಯಿ ಅವರು ದಕ್ಷಿಣ ಕನ್ನಡ ಜಿಲ್ಲೆಯ ಪೆರುವಾಯಿ ಗ್ರಾಮದವರು. ಇವರ ಕಾಲೇಜು ಶಿಕ್ಷಣವು ಕನ್ಯಾನದಲ್ಲಿ ನಡೆಯಿತು. ಇವರು 2020–21ರಲ್ಲಿ ಪಂಚಾಯತ್ ಚುನಾವಣೆಯಲ್ಲಿ ಸ್ಪರ್ಧಿಸಿ ವಿಜೇತರಾಗಿ ಉಪಾಧ್ಯಕ್ಷೆಯಾಗಿರುತ್ತಾರೆ. ಆ ಗ್ರಾಮದ ಸ್ವಚ್ಛತಾ ವಾಹನಕ್ಕೆ ಚಾಲಕಿ ದೊರೆಯದಿದ್ದಾಗ ತಾವು ಪಂಚಾಯತ್ ಉಪಾಧ್ಯಕ್ಷೆ ಎಂಬುದನ್ನು ಮರೆತು ತಾವೇ ವಾಹನ ತೆಗೆದುಕೊಂಡು ಗ್ರಾಮದ ಪ್ರತಿ ಮನೆಗೆ, ಗಲ್ಲಿಗಳಿಗೆ ತೆರಳಿ ಕಸ ಪಡೆದು ಗ್ರಾಮದ ಶುಚಿತ್ವಕ್ಕೆ ಅಡಿಪಾಯ ಹಾಕಿದ್ದಾರೆ. ಉಪಾಧ್ಯಕ್ಷೆಯ ಸರದಿ ಮುಗಿದ ನಂತರ ಅಧ್ಯಕ್ಷರಾದ ನಫೀಸಾ ಗರ್ಭಿಣಿಯಾದರೂ ಹೆರಿಗೆಯ ಹಿಂದಿನ ದಿನದವರೆಗೆ ಪಂಚಾಯಿತಿಗೆ ತೆರಳಿ ತಮ್ಮ ಕೆಲಸ ನಿರ್ವಹಿಸಿರುತ್ತಾರೆ. ಅಲ್ಲದೇ ಹೆರಿಗೆಯಾದ 9ನೇ ದಿನವೇ ಮತ್ತೆ ಸಾರ್ವಜನಿಕ ಕೆಲಸ ಪ್ರಾರಂಭಿಸಿ ಜನಸೇವೆ ಎಷ್ಟು ಮುಖ್ಯ ಎಂಬುದನ್ನು ತೋರಿಸಿಕೊಟ್ಟಿರುತ್ತಾರೆ. ಇವರು ಸ್ವಚ್ಛ ಗ್ರಾಮಕ್ಕೆ ಸಂಬಂಧಿಸಿದಂತೆ ರಾಜ್ಯ ತರಬೇತುದಾರರಾಗಿ ಆಯ್ಕೆಯಾಗಿರುತ್ತಾರೆ. ಇವರ ಕಾರ್ಯವನ್ನು ಮೆಚ್ಚಿ ಸರ್ಕಾರ ಮತ್ತು ಅನೇಕ ಸಂಘ–ಸಂಸ್ಥೆಗಳು ಇವರನ್ನು ಸನ್ಮಾನಿಸಿವೆ.

## ಡಾ. ಶಿವಪ್ಪ ಅರಿವು



ಡಾ. ಶಿವಪ್ಪ ಅರಿವು ಅವರು ಸಮಾಜ ಸುಧಾರಣೆಯಲ್ಲಿ ಸಂಪೂರ್ಣವಾಗಿ ತೊಡಗಿಸಿಕೊಂಡು ಅಸ್ಪೃಶ್ಯತೆ ನಿರ್ಮೂಲನೆಗಾಗಿ ಗೃಹಪ್ರವೇಶ, ದೇವಾಲಯ ಪ್ರವೇಶ, ಸಹಭೋಜನ, ಸಮತೆಯ ಟೀ, ವಿದ್ಯಾರ್ಥಿಗಳಿಗೆ ಪ್ರತಿಜ್ಞಾವಿಧಿ, ಒಂದು ನೀರು–ಒಂದು ಬಾವಿ ಇತ್ಯಾದಿ ಕಾರ್ಯಕ್ರಮಗಳನ್ನು 2014 ರಿಂದ ನಡೆಸಿಕೊಂಡು ಬಂದಿದ್ದಾರೆ. ವಿಧವೆ ಮತ್ತು ವಿಚ್ಛೇದಿತರಿಗೆ ಮರು ಮದುವೆಗಳನ್ನು ಸಹ ಏರ್ಪಡಿಸುತ್ತಿದ್ದಾರೆ. ಗ್ರಾಮೀಣ ಭಾರತದ ಇತಿಹಾಸ, ಕಲೆ, ಕೃಷಿ, ಕೈಗಾರಿಕೆ, ಕೌಶಲ್ಯಗಳನ್ನು ದಾಖಲಿಸಲು ಅರಿವು ಭಾರತ ಯೂಟ್ಯೂಬ್ ಚಾನೆಲ್ ಮೂಲಕ ಮುನ್ನೂರಕ್ಕೂ ಹೆಚ್ಚು ಡಾಕ್ಯುಮೆಂಟರಿಗಳನ್ನು ಪ್ರಕಟಿಸಿದ್ದಾರಲ್ಲದೆ ಭಾರತದ ಚರಿತ್ರೆ ಮತ್ತು ಸಂಸ್ಕೃತಿಯ ಬಗ್ಗೆ ಅನೇಕ ಪುಸ್ತಕಗಳನ್ನು ಪ್ರಕಟಿಸಿರುತ್ತಾರೆ. ಅನೇಕ ಸಂಘ ಸಂಸ್ಥೆಗಳು ಇವರ ಸಾಮಾಜಿಕ ಕಾಳಜಿಯನ್ನು ಗುರುತಿಸಿ, ಪ್ರಶಸ್ತಿ ನೀಡಿ ಪುರಸ್ಕರಿಸಿವೆ.

## ಶ್ರೀಮತಿ ಸಂಗಮ್ಮ ಸಾಣಕ

ಸಂಗಮ್ಮ ಸಾಣಕ ಆಳಂದ ತಾಲ್ಲೂಕಿನ ನಿಂಬಾಳ ಗ್ರಾಮದವರು. 2013ಕ್ಕಿಂತ ಮುಂಚಿನ ದಿನಗಳಲ್ಲಿ ನಿಂಬಾಳ ಸಾರಾಯಿ ಕುಡುಕರಿಂದ ತುಂಬಿ ಹೋಗಿತ್ತು. ಕುಡಿದ ಯುವಕರ ಗಲಾಟೆ, ಬೈಗುಳ ಎಲ್ಲೆಲ್ಲಿಯೂ ಕೇಳಿಬರುತ್ತಿತ್ತು. ಸಾರಾಯಿ ಕುಡಿತದಿಂದ ಅನೇಕರು ಜೀವ ತೆತ್ತರು. ಅನೇಕ ಮನೆಗಳು ಒಡೆದವು. ಇದನ್ನೆಲ್ಲ ನೋಡಿದ ಸಂಗಮ್ಮ ಸಾಣಕ ಅವರು ಇತರ ಗ್ರಾಮದ ಮಹಿಳೆಯರ ಜೊತೆ ಸೇರಿ 'ಜಡೆ ಶಾಂತಲಿಂಗೇಶ್ವರ ವ್ಯಸನ ಮುಕ್ತ ಸಮಾಜ ನಿರ್ಮಾಣ ಸಮಿತಿ' ರಚಿಸಿಕೊಂಡು ನಿಂಬಾಳ ಗ್ರಾಮವನ್ನು ಸಾರಾಯಿ ಮುಕ್ತವಾಗಿ ಮಾಡಲು ಛಲತೊಟ್ಟರು. ಕುಡುಕ ಗಂಡ ಮತ್ತು ಮಕ್ಕಳಿಂದ ನೊಂದ ಮಹಿಳೆಯರನ್ನು ಸಂಘಕ್ಕೆ ಸೇರಿಸಿಕೊಂಡರು. ಹಾಡು, ಬುದ್ಧಿಮಾತು, ಕೆಲ ಸಂದರ್ಭದಲ್ಲಿ ಕುಡುಕರನ್ನು ಮಠಕ್ಕೆ ಕರೆತಂದು ಅವರ ಮೇಲೆ ರೂ,1001/– ದಂಡ ಹಾಕಿಸಿದರು. ಇದು ಕುಡುಕರ ಮೇಲೆ ಪರಿಣಾಮ ಬೀರಿತು ಮತ್ತು ಒಬ್ಬೊಬ್ಬರಾಗಿ ಅವರು ಸಾರಾಯಿ ಬಿಟ್ಟರು. ಸಾರಾಯಿ ತಯಾರಾಗುತ್ತಿದ್ದ ದುಧನಿ ತಾಂಡದಲ್ಲಿಯೂ ಜಾಗೃತಿ ಮೂಡಿಸಿ ತಯಾರಿಕೆ ನಿಲ್ಲಿಸುವಂತೆ ಪ್ರೇರೇಪಿಸಿದರು. ಇವರ ಹೋರಾಟದಿಂದ ನಿಂಬಾಳ ಗ್ರಾಮ ಸಾರಾಯಿ ಮುಕ್ತವಾಯಿತು.



## ಶ್ರೀ ಡಿಂಗ್ರಿ ನರಸಪ್ಪ

ಡಿಂಗ್ರಿ ನರಸಪ್ಪ ಅವರು ಕುಷ್ಟಗಿ ತಾಲೂಕಿನ ಕುದುರಿಮೋತಿ ಗ್ರಾಮದವರು. ಆ ಗ್ರಾಮದ ಸ್ವಾಮಿಗಳು ಮಹಿಳೆಯರ ಮೇಲೆ ನಡೆಸಿದ ದೌರ್ಜನ್ಯದ ವಿರುದ್ಧ ಹೋರಾಟ ಪ್ರಾರಂಭಿಸಿದವರು. ದಲಿತ ಸಂಘರ್ಷ ಸಮಿತಿ ಸೇರಿ ದಲಿತ ಸಮುದಾಯಕ್ಕೆ ಆಗುತ್ತಿರುವ ಅನ್ಯಾಯದ ವಿರುದ್ಧ ನಿರಂತರವಾಗಿ ಹೋರಾಡುತ್ತಾ ಬಂದಿದ್ದಾರೆ. ಮಾನ್ವಿ ತಾಲೂಕಿನ ಅರವಳ್ಳಿ ಗ್ರಾಮದ ಬೆತ್ತಲೆ ಸೇವೆ ಅದೇ ತಾಲ್ಲೂಕಿನ ನೀರಮಾನ್ವಿ ಗ್ರಾಮದಲ್ಲಿನ ದೇವದಾಸಿ ಪದ್ಧತಿ ಇವುಗಳ ವಿರುದ್ಧ ತಿಂಗಳುಗಳ ಕಾಲ ನಿರಂತರವಾಗಿ ಹೋರಾಡಿ ಆ ಪದ್ಧತಿಗಳನ್ನು ನಿಲ್ಲಿಸುವಲ್ಲಿ ಪ್ರಮುಖ ಪಾತ್ರ ವಹಿಸಿರುತ್ತಾರೆ. 1991 ರಿಂದ ಜಿಲ್ಲಾ ಸಾಕ್ಷರತಾ ಮಿಷನ್ ಸೇರಿ ಜನರನ್ನು ಅಕ್ಷರಸ್ಥರನ್ನಾಗಿ ಮಾಡಲು ಶ್ರಮಿಸಿರುತ್ತಾರೆ. 2007ರಲ್ಲಿ 'ಶ್ರುತಿ ಸಂಸ್ಕೃತಿ ಸಂಸ್ಥೆ'ಯನ್ನು ಹುಟ್ಟು ಹಾಕಿ ಜಿಲ್ಲೆಯಾದ್ಯಂತ ಬಾಲ್ಯ ವಿವಾಹ, ಅಸ್ಪೃಶ್ಯತೆ ನಿವಾರಣೆ, ಬಾಲಕಾರ್ಮಿಕ ಪದ್ಧತಿ, ದೇವದಾಸಿ ಪದ್ಧತಿ ಮುಂತಾದವುಗಳ ವಿರುದ್ಧ ಸಕ್ರಿಯ ಜನ ಜಾಗೃತಿ ಮೂಡಿಸಿರುತ್ತಾರೆ ಅಲ್ಲದೆ ಹಾಡು, ನಾಟಕ, ತಮಟೆ ಮುಂತಾದ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಮಕ್ಕಳನ್ನು ತೊಡಗಿಸಿಕೊಂಡು ಸಾಮಾಜಿಕ ಅರಿವನ್ನು ಮೂಡಿಸುವ ಕೆಲಸದಲ್ಲಿ ತೊಡಗಿದ್ದಾರೆ.



ಪ್ರಶಸ್ತಿ ಪ್ರದಾನ ಮಾಡುವವರು

**ಶ್ರೀ ಕೆ.ಆರ್. ರಮೇಶ್ ಕುಮಾರ್**

ಮಾಜಿ ಸಚಿವರು ಮತ್ತು ವಿಧಾನಸಭೆಯ ಮಾಜಿ ಅಧ್ಯಕ್ಷರು, ಕರ್ನಾಟಕ ಸರ್ಕಾರ

ಮುಖ್ಯ ಅತಿಥಿಗಳು

**ಪ್ರೊ. ಪುರುಷೋತ್ತಮ ಬಿಳಿಮಲೆ**

ಅಧ್ಯಕ್ಷರು, ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಕರ್ನಾಟಕ ಸರ್ಕಾರ

ಅಧ್ಯಕ್ಷತೆ

**ಶ್ರೀ ಎಸ್. ಮರಿಸ್ವಾಮಿ**

ಅಧ್ಯಕ್ಷರು, ಸ್ಫೂರ್ತಿಧಾಮ

ಸಂಜೆ 6.00ಕ್ಕೆ : **'ಪಂಚಮ ಪದ'** ನಾಟಕ ಪ್ರದರ್ಶನ

ಸಂಜೆ 7.00ಕ್ಕೆ : ಭೋಜನ

ಎಲ್ಲರಿಗೂ ಆದರದ ಸ್ವಾಗತ

**ಸ್ಫೂರ್ತಿಧಾಮದ ಬಳಗ**